

ಮಂಪರು. ದೊಡ್ಡ ಟಾಕೀಸು ಹಾಲು. ಯಾವ ಸಿನಿಮಾದ ಸಾಲುದ್ದದ ಸಂಭಾಷಣೆ. ಅವಳು ಕೈ ಹಿಡಿದು ಕುಳಿತಂತೆ. ಕುಳಿತು ಮುಟ್ಟು ಎನ್ನುವಂತೆ. 'ನನಗೆ ಗಂಡಸ್ಥನ ಇಲ್ಲ ಕಣೇ' ಎಂದು ಇವನು ಹೇಳಿದಂತೆ, ಅವಳು ಆ ಕ್ಷಣಕ್ಕೆ ಓಡಿ ಹೋಗಿ ರಭಸದಿಂದ ಹಂಪಿ ಎಕ್ಸ್‌ಪ್ರೆಸ್ ರೈಲಿಗೆ ಹತ್ತಿದಂತೆ. ಕಿಟಕಿಯಲ್ಲಿ ಶೇಂಗಾವನ್ನು ನನ್ನೆಡೆಗೆ ಎಸೆದಂತೆ. ತನ್ನೂರಿನ ಗದ್ದೆಯಲ್ಲಿ ಬೆಳೆದ ಶೇಂಗಾ ಇಡೀ ರೈಲ್ವೆ ಪ್ಲಾಟ್‌ಫಾರ್ಮ್ ತುಂಬಾ ಬಿದ್ದಂತೆ. ತಾನು ಶೇಂಗಾವನ್ನು ಆರಿಸುತ್ತಿದ್ದಂತೆ. ಅಲ್ಲೇ ನಿಂತ ಅಣ್ಣ- ಅತ್ತಿಗೆಯನ್ನು ಕರೆದಂತೆ. ಯಾರೊಬ್ಬರೂ ಬರುತ್ತಿಲ್ಲ. ಅಪ್ಪ- ಅಮ್ಮನಿಗೆ ಗೂನು ಬೆನ್ನು. ನಿದ್ದೆಯ ಮಂಪರಿನಲ್ಲಿ ಬಿದ್ದ ಜೊಂಪು ಕನಸು ವಾಸ್ತವಕ್ಕಿಂತಲೂ ಘೋರ ಅನ್ನಿಸಿತ್ತು.

* * *

ತಾನು ಇನ್ನು ಟೀ ಮಾರುವುದು ಬಿಡಬೇಕೆಂದು ನಿಶ್ಚಯಿಸಿದ ದಿನದಿಂದ ನಿದ್ದೆ ನಿಧಾನವಾಗಿ ಸುಳಿಯಲು ಆರಂಭಿಸಿತ್ತು. ಈ ದಿನದ ಬೆಳಗ್ಗೆ ತನ್ನ ಕೊನೆಯ ದಿನ. ರೇವಣಕರ ಸಾಹುಕಾರ ಕಷ್ಟದಿಂದ ಅವನ ನಿರ್ಧಾರ ಒಪ್ಪಿದ್ದಾನೆ. ಇನ್ನೆರಡು ದಿನಕ್ಕೇ ಯುಗಾದಿಯಾದ್ರಿಂದ ಅದು ಮುಗಿಯೋದರಲ್ಲಿ ಇನ್ನೊಬ್ಬರನ್ನು ಹುಡುಕಿ ಕೊಡುವುದಾಗಿ ಇವನು ತಿಳಿಸಿದ್ದಾನೆ. ಕೊನೆಯ ದಿನದ ರಾತ್ರಿ ಮುಗಿಯಲು ಇನ್ನೆರಡು ಗಂಟೆ ಬಾಕಿ ಇರುವಾಗ ಸುಗಂಧಿ ಬಂದಿದ್ದಳು. ಅವಳು ಬರುವುದು ಅಪೂರ್ವ ಅಲ್ಲದಿದ್ದರೂ ಬಹಳಷ್ಟು ದಿನಗಳ ನಂತರ ಕಾಣಿಸಿದ್ದಳು. ಕಪ್ಪು ಗಡಸು ಚರ್ಮದ ಮೇಲೆ ಕೆಂಪು ಸೀರೆ ತೊಟ್ಟು, ಹಸಿರ ಬಳೆ ಹಾಕಿಕೊಂಡು, ಕಾಸಿನಗಲದ ಕುಂಕುಮ ಇಟ್ಟುಕೊಂಡು ಬಂದ ಸುಗಂಧಿ ಇವನ ಅಂಗಡಿ ಮುಂದೆ ನಿಂತು, 'ಮಗಾ ಬಹಳ ದಿನ ಆಯ್ತಾಲಾ ನೋಡಿ... ಚಾ ಕೊಡಪ್ಪ' ಎಂದಾಗ ಇವನು ಚಾ ಹಾಕಿ ಕೊಟ್ಟ. ಇವನು ಕೊಟ್ಟ ಚಹಾವನ್ನು ಎಷ್ಟು ಚೆನ್ನಾಗಿ ನಿಧಾನವಾಗಿ ಕುಡಿಯುತ್ತಾಳೆ. 'ನಿನ್ನ ಹಾಗೆ ರುಚಿಯಾದ ಚಹಾ ಯಾರೂ ಮಾಡಲ್ಲ' ಎನ್ನುತ್ತಾಳೆ. ಪ್ರತಿ ಬಾರಿಯೂ ಅವಳು ಕೊಡುವುದನ್ನು ಇವನು ಬೇಡವೆನುತ್ತಾನೆ. ಆದರೆ, ಅವಳು ಕೇಳುವುದಿಲ್ಲ. ನಿಧಾನವಾಗಿ ತನ್ನ ಸೀರೆ ಗಂಟಲ್ಲಿ ಇದ್ದ 10 ರೂಪಾಯಿ ನೋಟು ತೆಗೆದು ಕಣ್ಣಿನಲ್ಲಿ ಇಟ್ಟು ಮಂತ್ರಿಸಿ ಇವನ ಗಲ್ಲಾಪೆಟ್ಟಿಗೆಯೊಳಗೆ ಇಡುತ್ತಾಳೆ. ಆದರೆ ಈ ದಿನ ಅದೇಕೋ ಅಲ್ಲೇ ನಿಂತು ಬಿಟ್ಟಿದ್ದಳು.

'ಯಾಕೆ ಸುಗಕ್ಕ ಎಲ್ಲಿ ಹೋಗಿದ್ದೆ ಇಷ್ಟು ದಿನ?' ಎಂದು ಕೇಳಿದ. 'ಹತ್ತು ದಿನದ ಹಿಂದೆ ತಲೆ ಸುತ್ತಿ ಬಿದ್ಬಿಟ್ಟೆ. ಸರ್ಕಾರಿ ಆಸ್ಪತ್ರೆದಾಗ ಏಡ್ಸ್ ಆಗಿದೆ ಅಂದ್ರು. ನನಗೆ ಗೊತ್ತಾಗಲಿಲ್ಲ. ನಮ್ ಸಮಾಜದವರು ಬಂದು, ನಿನ್ನ ಪಕ್ಕ ಮಲಗಿದ ಯಾವನೋ ಲೋಫರ್‌ನಿಂದ ನಿನಗೆ ಬಂದಿದೆ. ಇನ್ನು ಮುಂದೆ ಹುಷಾರು ಅಂತ ತಿಳಿಸಿ ಮಾತ್ರೆ ಕೊಟ್ಟರು' ಅಂದು ನಕ್ಕುಬಿಟ್ಟಳು.

ಇವನು ತಬ್ಬಿಬ್ಬಾದ. 'ಮತ್ಯಾಕೆ ಬಂದಿದೀಯಾ' ಅಂದಾಗ ಅವಳು, 'ನೋಡು ನಾನು ಮಲಿಕಳ್ಳಾಕೆ ಬರಲಿಲ್ಲ ದೊರೆ. ನಾನು ಬರೋದು ನಮ್ಮ ಹಂಪಿ ಎಕ್ಸ್‌ಪ್ರೆಸ್ಸು ರೈಲು ಒಳಗೆ ಅಡ್ಡಾಡಕ್ಕೆ. ಊರು, ಹೆತ್ತವರು ಆಚೆ ಹಾಕಿದ್ರು, ಆ ರೈಲು ನಮ್ಮವಳಾಗಿ ಕೈ ಹಿಡಿದಿದ್ದಾಳೆ. ಅವನ ಯಜಮಾನ ಆಗಾಗ ನನ್ನ ಆಚೆ ಹಾಕಿರಬಹುದು. ಆದ್ರೆ ಅವಳದು ತಾಯಿ ಹೃದಯ. ಅವಳೊಬ್ಬಳೇ ನನ್ನ ಆಚೆ ಹಾಕಿಲ್ಲ. ನಿಮಗೆ ಜೀವ ಐತಿ ಅಂತ ಕಾಣೋದು ನನಗೆ ಕಾಣಲ್ಲ ಮಗ, ನನಗೆ ಜೀವ ಅನ್ನೋದು, ನಿಮಗೆ ಕಬ್ಬಿಣ ಅನ್ಸುತ್ತೆ' ಎಂದು ಸೀರೆಗಂಟಿನ ನೋಟು ತೆಗೆದಳು. ಈ ನೋಟುಗಳಲ್ಲಿ ಕೊಡುವವರ ಕಥೆಗಳಿವೆ ಎನ್ನುತ್ತಾ ತೋರಿಸಿದಳು.

ಅಷ್ಟರಲ್ಲೇ ರೈಲು ಬಂದ ಶಬ್ದವಾಯಿತು. ಹೊರಟಳು. ಇವಳ ನೋಟುಗಳಲ್ಲಿನ ಸಾವಿರಾರು ಕಥೆಗಳಲ್ಲಿ ನನ್ನದೂ ಒಂದು ಕಥೆ ಅಷ್ಟೇ ಎಂದು ಮನಸ್ಸು ನಿರುಮ್ಮಳವಾಯಿತು. ಇನ್ನು ತಾನು ಅಂಗಡಿ ಮುಚ್ಚಿ ರೇವಣಕರ ಸಾವಕಾರರ ಬಳಿ ಹೋಗಿ, ಯುಗಾದಿ ನಂತರ ಸಿಗುವ ಹೊಸ ಹುಡುಗ ನಾನೇ ಎನ್ನಬೇಕು ಎಂದು ಅನ್ನಿಸಿದಾಗಲೇ ಹೊರಡುತ್ತಿದ್ದ ರೈಲಿನ ಶಬ್ದ ಜೋಗುಳದಂತೆ ಅನ್ನಿಸಿತು. ●